# ಶ್ರಾವಣ ದರ್ಶನ 5ನೇ ದಿನದ ಕಾರ್ಯಕ್ರಮ

**ಚಿತ್ರದುರ್ಗ ಜು. 25 :** ಸತ್‌ಚಿಂತನೆ, ಸದ್ವರ್ತನೆ ನಮ್ಮನ್ನು ಪರಿವರ್ತನೆಯ ಕಡೆಗೆ ಕರೆದುಕೊಂಡು ಹೋಗುತ್ತದೆ. ಕಾರಣ ಪರಿವರ್ತನೆ ಎನ್ನುವ ತತ್ತ್ವದ ಅಡಿಯಲ್ಲಿ ಬದುಕನ್ನು ಆರಂಭಿಸಿಕೊಳ್ಳಬೇಕು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.




ಮುರುಘಾಮಠದಲ್ಲಿ ಶನಿವಾರ ನಡೆದ ಶ್ರಾವಣ ದರ್ಶನ ಐದನೇ ದಿನದ ಫೇಸ್‌ಬುಕ್ ಮತ್ತು ಯುಟ್ಯೂಬ್ ಲೈವ್ ಕಾರ್ಯಕ್ರಮದಲ್ಲಿ ಸತ್‌ಚಿಂತನೆ + ಸದ್ವರ್ತನೆ = ಪರಿವರ್ತನೆ ವಿಷಯ ಕುರಿತು ಮಾತನಾಡಿದ ಅವರು, ಆರೋಗ್ಯದ ಕಡೆ ಕರೆದುಕೊಂಡು ಹೋಗಬೇಕು. ಸತ್‌ಚಿಂತನೆ ಪಡೆಯುವ ಮಾರ್ಗ ಯಾವುದು. ನಮಗೆ ದರ್ಶನ ಮಾಡಿಸುವುದು. ಸಮ್ಯಕ್‌ಜ್ಞಾನವನ್ನು ಪಡೆಯುವ ಬಗೆ ಹೇಗೆ ಎಂಬುದರ ಚಿಂತನೆ ಮಾಡಬೇಕು. ಸತ್‌ಚಿಂತನೆಯೇ ಅಂತರ್ಮುಖಿ ಸಾಧನೆ, ಸಂತೃಪ್ತಿಯ ಸಾಧನೆ. ಯಾರ ಬದುಕಿನಲ್ಲಿ ಸತ್‌ಚಿಂತನೆ ಸ್ಫುರಿಸುತ್ತದೆಯೋ ಅಂಥವರ ಬದುಕು ಗೊಂದಲಮಯವಾಗುವುದಿಲ್ಲ. ಬಹಳಜನರ ಬದುಕಿನಲ್ಲಿ ಕನಫ್ಯೂಷನ್ ಇವೆ. ಕಾರಣ ಅರಿವು ಜಾಗೃತವಾಗಿರುವುದಿಲ್ಲ. ಯಾರ ಬದುಕಿನಲ್ಲಿ ಸತ್‌ಚಿಂತನೆ ಇದೆಯೋ ಅವರ ಬದುಕಿನಲ್ಲಿ ತೊಡಕುಗಳು ಇರುವುದಿಲ್ಲ. ಇದರಿಂದ ಜಗಳವಾಡುವ ಸಂದರ್ಭ ಬರುವುದಿಲ್ಲ. ಯಾರಲ್ಲಿ ಸತ್‌ಚಿಂತನೆ ಇರುವುದಿಲ್ಲವೋ ಅವರಲ್ಲಿ ಮತೀಯ ಘರ್ಷಣೆಗಳು ಇರುತ್ತದೆ. ಜಗಳಮುಕ್ತವಾದ ಜೀವನ ನಡೆಸಬೇಕು. ವ್ಯಸನಮುಕ್ತ ಸಮಾಜ, ಸಾಲಮುಕ್ತ ಸಮಾಜ ಮೊದಲಾಗಿ ಸತ್‌ಚಿಂತನೆ ಬೇಕು. ವಿವೇಕಯುಕ್ತವಾದ ಜೀವನವನ್ನು ನಮಗೆ ಪರಿಚಯ ಮಾಡಿಕೊಡುತ್ತದೆ. ಮೂರುಶಬ್ದಗಳ ಮೂಲಕ ಬದುಕಿನ ಆಂತರ್ಯವನ್ನು ತಿಳಿಯುವುದು. ಸಮುದ್ರದ ಆಳಕ್ಕೆ ಹೋದರೆ ಮುತ್ತುರತ್ನಗಳು ಸಿಗುತ್ತವೆ. ನಮ್ಮ ಒಳಗಡೆ ಒಂದು ಅಂತರಂಗದ ಲೋಕ ಅಥವಾ ಸಮುದ್ರ ಇದೆ. ಅದು ಜ್ಞಾನ ಸಮುದ್ರ. ಬೌದ್ಧಿಕವಾಗಿರುವ ಸಮುದ್ರ. ಅದರ ಆಳಕ್ಕೆ ಹೋದಾಗ ಅಲ್ಲಿ ಅನಘ್ರ್ಯವಾಗಿರುವ ಸಂಪತ್ತು ಸಂಪಾದಿಸಬಹುದು.

**ಸದ್ವರ್ತನೆ :** ಅಂದರೆ ಎಚ್ಚರಿಕೆಯ ವರ್ತನೆ. ಎಚ್ಚರಿಕೆಯಿಂದ ನಡೆಯದವರು ಎಡವಿ ಬೀಳುವ ಸಾಧ್ಯತೆ ಇದೆ. ಶರಣಸಂಸ್ಕøತಿ ಅಪ್ಪ ಸಂಸ್ಕøತಿ, ಅವ್ವ ಸಂಸ್ಕøತಿ, ಅಣ್ಣ ಸಂಸ್ಕøತಿ, ಅಯ್ಯಾ ಸಂಸ್ಕøತಿ. ನುಲಿಯ ಚಂದಯ್ಯ, ಮಡಿವಾಳ ಮಾಚಯ್ಯ, ಮಾದಾರ ಧೂಳಯ್ಯ ಮೊದಲಾದ ಅಯ್ಯ ಸಂಸ್ಕøತಿ.

ಸಮತೋಲನದ ವರ್ತನೆ : ಸಮತೋಲನಕ್ಕೆ ಒಳಗಾಗಬೇಕು. ಪಂಚಾಯಿತಿಯ ಸಂದರ್ಭದಲ್ಲಿ ಆಮಿಷಕ್ಕೆ ಒಳಗಾಗಿ ತಮಗೆ ಬೇಕಾದವರಿಗೆ ನ್ಯಾಯ ಕೊಡುವ, ಬೇಡದವರಿಗೆ ಅನ್ಯಾಯವನ್ನು ಕೊಡುವ ಸಂದರ್ಭ ತಂದುಕೊಳ್ಳಬಾರದು.

**ಪ್ರಬುದ್ಧ ವರ್ತನೆ :** ಪ್ರಬುದ್ಧತೆಗೆ ಯಾವುದೇ ರೀತಿಯ ಅಂತರ, ವ್ಯತ್ಯಾಸ ಇರುವುದಿಲ್ಲ. ಪ್ರಬುದ್ಧತೆ ಸಾಧನೆಯಿಂದ ಸಿದ್ಧಿಸುತ್ತದೆ. ಜಾಣ ನಡೆ ಜಾಣ ನುಡಿ ಇರಬೇಕು. ನಮ್ಮನ್ನು ನೋಡಿ ಬೇರೆಯವರು ಹಾಸ್ಯಕ್ಕೆ ಒಳಗು ಮಾಡಬಾರದು. ಅಗ್ನಿ ಸಣ್ಣದಾದರೂ ಸುಡುತ್ತದೆ. ಕಾರಣ ಅಗ್ನಿಯ ಕೆಲಸ ಸುಡುವುದು. ಜ್ಞಾನ ಎನ್ನುವ ಅಗ್ನಿಯು ಸುಡುತ್ತದೆ. ಇದು ಕೆಟ್ಟದ್ದನ್ನು ಸುಡುತ್ತದೆ. ಚೆನ್ನಬಸವಣ್ಣನವರು ಅನೇಕ ಜಟಿಲ ಸಮಸ್ಯೆಗಳನ್ನು ಅತ್ಯಂತ ಬುದ್ಧಿವಂತಿಕೆಯಿಂದ ಬಗೆಹರಿಸಿದವರು.

**ಪರಿವರ್ತನೆ :** ಸತ್‍ಚಿಂತನೆ, ಸದ್ವರ್ತನೆ ನಮ್ಮನ್ನು ಪರಿವರ್ತನೆಯ ಕಡೆಗೆ ಕರೆದುಕೊಂಡು ಹೋಗುತ್ತದೆ. ಪರಿವರ್ತನೆ ಎನ್ನುವ ತತ್ತ್ವದ ಅಡಿಯಲ್ಲಿ ಬದುಕನ್ನು ಆರಂಭಿಸಿಕೊಳ್ಳಬೇಕು. ವೈಯಕ್ತಿಕವಾದ ಪರಿವರ್ತನೆ ನೀಡಬೇಕು. ಶ್ರೀಮಠದಲ್ಲಿ ಕಳೆದ 30ವರ್ಷಗಳಿಂದ ತಂದಂತಹ ಪರಿವರ್ತನೆಗಳು ಹಲವು. ಸಾಂಸ್ಥಿಕವಾದ ಪರಿವರ್ತನೆ, ಸಂಸ್ಥೆಗಳಲ್ಲಿ ಪರಿವರ್ತನೆ ಆಗಬೇಕು. ಒಳನೋಟವು ಸಹ ಸಾಧನೆಯ ಮೂಲಕ ಸಿದ್ಧಿಸುತ್ತದೆ. ಈ ಸಂಸ್ಥೆಯ ಜೊತೆ ಸಂಪರ್ಕ ಇಟ್ಟುಕೊಂಡವರಿಗೆ ಪರಿವರ್ತನೆ ಸಾಧ್ಯವಾಗಿದೆ. ಸಾಮಾಜಿಕವಾದ ಪರಿವರ್ತನೆ. ಕಲ್ಲುನಾಗರಕ್ಕೆ ಹಾಲೆರೆಯುವುದನ್ನು ಬಿಡಿಸಿ ಹಸುಗೂಸುಗಳಿಗೆ ಚಿಕ್ಕಮಕ್ಕಳಿಗೆ ಹಾಲನ್ನು ಕೊಡುವುದರ ಮೂಲಕ ಪರಿವರ್ತನೆಯನ್ನು ತರಲಾಯಿತು. ಧಾರ್ಮಿಕ ಪರಿವರ್ತನೆಯೂ ನಮ್ಮಲ್ಲಿ ಸಾಧ್ಯವಾಗಿದೆ ಎಂದು ಹೇಳಿದರು.